**MVC No**.740 /2019

**PW**-2

**ಸಾಕ್ಷಿಯನ್ನು ದಿನಾಂಕ 06.08.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಈ ದಿನ ಎಂ.ಎಲ್.ಸಿ ಪುಸ್ತಕದ ಪ್ರತಿ ಹಾಜರುಪಡಿಸುತ್ತಿದ್ದೇನೆ. ಸದರಿ ದಾಖಲೆಯನ್ನು **ನಿಪಿ-14** ಎಂದು ಗುರುತಿಸಲಾಯಿತು. ನಿಪಿ-14 ರಲ್ಲಿ ನಮೂದು ಇರುವ ಗಾಯಗಳ ಪೈಕಿ ಕ್ರಮ ಸಂ.1 ರಲ್ಲಿ ಕುತ್ತಿಗೆ ಗಾಯ ತೀವ್ರ ಸ್ವರೂಪದು ಇದೆ, ಉಳಿದ ಗಾಯಗಳು ಸಾಮಾನ್ಯ ಸ್ವರೂಪದ ಇವೆ. ನಿಪಿ-14 ರಲ್ಲಿ ಹೇಳಿರುವಂತೆ ಗಾಯಗಳು ಆಗಿದ ವ್ಯಕ್ತಿ ಮೊದಲಿನಂತೆ ಕೆಲಸ ಮಾಡಲು ಆಗುವುದಿಲ್ಲ ಎಂದರೆ ಅದನ್ನು ನಾನು ಹೇಳಲು ಆಗುವುದಿಲ್ಲ.

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಆರ್.ಪಿ.ಪಿ ವಕೀಲರಿಂದಃ**

ಅಪಘಾತ ಆಗಿದ ದಿನ ನಾನೇ ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿ ಇದ್ದೆ. ಗಾಯಾಳು ಅಪಘಾತ ಹೇಗೆ ಆಯಿತು ಎಂದು ಹೇಳಿಕೆ ಕೊಟ್ಟಿದ್ದಾರೆ ಎಂದರೆ ನಿಜ. ನಿಪಿ-14 ರಲ್ಲಿ ನಮೂದು ಇರುವಂತೆ ಗಾಯಾಳು ದ್ವಿಚಕ್ರ ವಾಹನದಲ್ಲಿ ಹೋಗುವಾಗ ಅವರಿಗೆ ಖಾಸಿಗೆ ಬಸ್ಸು ಡಿಕ್ಕಿ ಮಾಡಿದೆ. ನಾನು ಗಾಯಾಳುವಿಗೆ ಪ್ರಥಮ ಚಿಕಿತ್ಸೆ ಮಾತ್ರ ಕೊಟ್ಟಿದ್ದೇನೆ ಎಂದರೆ ನಿಜ. ಗಾಯಾಳು ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ ಬಗ್ಗೆ

ವರದಿ ಅನ್ನು ನೋಡಿ ನಾನು ಗಾಯಾದ ಪ್ರಮಾಣ ಪತ್ರ ಕೊಟ್ಟಿದ್ದೇನೆ.  ಚಿಕಿತ್ಸೆ ನೀಡಿದ ವೈದ್ಯರು ಮಾತ್ರ ಗಾಯಾಳುವಿಗೆ ನ್ಯೂನತೆಯ ಬಗ್ಗೆ ಹೇಳಬಹುದು ಎಂದರೆ ನಿಜ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

**2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು**
**ಮೈಸೂರು**